1. ಮುದ್ದು ರಾಮರ ಬಂಟ

ಬುದ್ಧಿಯುಳ್ಳ ಹನುಮಂತ

ಹದ್ದಾಗಿ ಹಾರಿದನೆ ಆಕಾಶಕೆ || PA ||

ನಿದ್ರೆ ಗೈವ ಸಮಯದಿ ಎದ್ದು ಬಾರೆಂದರೆ ಅ-

ಲ್ಲಿದ್ದ ರಕ್ಕಸರನೆಲ್ಲಾ ಗೆಲಿದಾತನೆ || A PA ||

ದಾರಿ ದೂರವೆಂದು ದಾರಿಯನೆ ನಿರ್ಮಿಸಿದ

ಧೀರ, ರಾಮರ ಬಂಟ ಹನುಮಂತನೆ | ನೋಡಿ-

ಬಾರೆಂದರೆ ಪೋಗಿ ಲಂಕೆಯ ಸುಟ್ಟು

ಬೇಗದಲಿ ಮರವನೇರಿ ಕುಳಿತಾತನೆ || 1 ||

ಅಶೋಕ ವನದಲ್ಲಿ ಸೀತೆಯನು ನೋಡಿದ

ಶ್ರೀರಾಮರ ಬಂಟ ಹನುಮಂತನೆ |

ಮಾತೆಯನು ಮಾತಾಡಿಸಿ ಕ್ಷೇಮ ಸುದ್ದಿ

ತಿಳಿಸಿದ ರಘುವೀರ ದೂತ ಜಾಣ ನಿವನೆ || 2 ||

ಆತನ ಮಾತಿಗೆ ಸೇತುವೆನೆ ಕಟ್ಟಿಸಿದ

ಸೀತಾರಾಮರ ಬಂಟ ಹನುಮಂತನೆ |

ಸೀತಾದೇವಿ ಅಮ್ಮನಿಗೆ ಪ್ರೀತಿಯ ಬಂಟನಾದ

ಮುಖ್ಯಪ್ರಾಣ ಹಯವದನನ ದೂತನೆ || 3 ||

2.ರಾಮನೆಂಬೋ ನಾಮವ ನೆನೆದರೆ ಭಯವಿಲ್ಲ ಮನಕೆ

ಮೂರು ಲೋಕಕೆ ಕಾರಣ ಕರ್ತಾ ನಾರಾಯಣ ಜಗಕೆ ಶ್ರೀಮನ್ ನಾರಾಯಣ ಜಗಕೆ || PA ||

ಮತ್ಸ್ಯಾವತಾರವ ತಾಳಿದ ರಾಮ ವೇದವ ತರುವದಕೆ |

ಬೆತ್ತವ ಬೆನ್ನಲಿ ಪೊಟ್ಟಿದ ರಾಮ ಕೂರ್ಮಾವತಾರಕ್ಕೆ || 1 ||

ಭೂಮಿಯ ಪೊಟ್ಟು ನೀರೊಳು ಮುಳುಗಿದ ವರಾಹವತಾರಕ್ಕೆ |

ಕರುಳನು ಬಗೆದು ಮಾಲೆಯ ಧರಿಸಿದ ಪ್ರಹ್ಲಾದನಸಲಹುದಕೆ || 2 ||

ಭೂಮಿಯದಾನವ ಬೇಡಿದ ರಾಮ ವಾಮನವತಾರಕ್ಕೆ |ತಾಯಿಯ ಶಿರವನು ಅಳಿದನು ರಾಮ ಭಾರ್ಗವತಾರಕ್ಕೆ || 3 ||

ವನವಾಸವ ಮಾಡಿದ ರಾಮ ಜನಕನ ವಾಕ್ಯಕ್ಕೆ ಮಾವ ಕಂಸನ ಕೊಂದನು ಕೃಷ್ಣ ತಾಯಿಯ ಬಿಡಿಸಲಿಕ್ಕೆ || 4 ||

ಸತಿಯರ ವ್ರತಗಳ ಕೆಡಿಸಿದ ರಾಮ ತ್ರಿಪುರರ ಸಲಹುದಕ್ಕೆ | ವಾಹನ ಬಿಟ್ಟು ತುರಗವ ನೇರಿದ ಕಲ್ಕ್ಯವತಾರಕ್ಕೆ || 5 ||

ಶ್ಯಾಮಲ ವರ್ಣವ ತಾಳಿದ ರಾಮ ಸಾಮರ್ಥ್ಯನು ಜಗಕೆ |

ಸ್ವಾಮಿ ಶ್ರೀ ಪುರಂದರ ವಿಠಲನು ರಾಮ ಗೋವಿಂದನು ಜಗಕೆ || 6 ||

3. ಬೂಚಿ ಬಂದಿದೆ,

ರಂಗ ಬೂಚಿ ಬಂದಿದೆ ||ಪ||

ಚಾಚಿ ಕುಡಿದು ಸುಮ್ಮನೆ

ನೀ ಪಾಚಿಕೊಳ್ಳೊ ಕೃಷ್ಣಯ್ಯ ||ಅ||

ನಾಲ್ಕು ಮುಖದ ಬೂಚಿಯೊಂದು

ಗೋಕುಲಕ್ಕೆ ಓಡಿ ಬಂದು

ಲೋಕರನ್ನು ಎಳೆದುಕೊಂಡು

ಕಾಕು ಮಾಡಿ ಒಯ್ಯುವುದಕೆ ||

ಮೂರು ಕಣ್ಣಿನ ಬೂಚಿಯೊಂದು
ಊರೂರ ಸುತ್ತಿ ಬಂದು ದ್ವಾರದಲ್ಲಿ
ನಿಂತಿದೆ ನೋಡೊ ಪೋರರನ್ನು
ಒಯ್ಯುವುದಕೆ ||

ಅಂಗವೆಲ್ಲ ಕಂಗಳುಳ್ಳ |ಶೃಂಗಾರ ಮುಖದ
ಬೂಚಿ| ಬಂಗಾರದಂಥ ಮಕ್ಕಳನೆಲ್ಲ
ಕಂಗೆಡಿಸಿ ಒಯ್ಯುವುದಕೆ ||

ಆರು ಮುಖದ ಬೂಚಿಯೊಂದು|ಈರಾರು
ಕಂಗಳದಕೆ |ವಾರು ವಾರು ಅಳುವ ಮಕ್ಕಳ
|ದೂರ ಸೆಳೆದು ಒಯ್ಯುವುದಕೆ ||

ಮರದ ಮೇಲೆ ಇರುವುದೊಂದು| ಕರಾಳ
ಮುಖದ ಬೂಚಿ| ತರಳರನ್ನು
ಎಳೆದುಕೊಂಡು|
ಪುರಂದರವಿಠಲಗೊಪ್ಪಿಸಲಿಕೆ ||

4. ಜೀಕೋಣ ಬನ್ನಿ ಜೋಕಾಲಿ

ಜೀವನದ ಅಮರ ಜೋಕಾಲಿ||

ಸಂತಸದಿ ಚಿಂತೆಯನು ನೀಗಿ

ಅಂತರವ ತೊರೆದು ಒಂದಾಗಿ|

ಕಡಲಿನಲಿ ಕುಣಿವ ಅಲೆಯಾಗಿ

ತಡೆಯದಲೇ ನಾವು ಒಂದಾಗಿ||೧||

ಬೀಳುವೆವು ಎಂಬ ಭಯವೇಕೆ

ಬಳಲಿಕೆಯ ಸುಳಿವು ನಮಗೇಕೆ|

ಬಿರುಗಾಳಿಯಲ್ಲಿ ತೋಗೋಣ

ಮಳೆ ಬಿಲ್ಲಿನಂತೆ ಮಣಿಯೋಣ||೨||

ಬಡತನದ ಗಿಡವ ಕಡಿಯೋಣ

ಅಡೆತಡೆಯ ತೊಡಕು ಬಿಡಿಸೋಣ||

ಬಿಡುಗಡೆಯ ಹಾಡು ಹಾಡೋಣ

ಕಡೆತನಕ ತೂಗಿ ನಲಿಯೋಣ||೩||